Tours of the Members in Drought hit Areas

ಶ್ರೀ ವಾಟಾಳ್ ನಾಗರಾಜ್.—ಬರಗಾಲ ಪೀಡಿತ ಪ್ರದೇಶಗಳಿಗೆ ತಮ್ಮ ನ್ಯಾಯ ಕಕ್ಷದಲ್ಲಿ ವಿರೋಧ ಪಕ್ಷದ ಕೆಲವು ಮಾನ್ಯ ಸದಸ್ಯರು ಹೋಗಿ ನೋಡಿಕೊಂಡು ಬಂದ ಮೇಲೆ ಅದಕ್ಕೆ ಸಂಬಂಧಪಟ್ಟ ಒಂದು ವರದಿಯನ್ನು ತಾವು ಕೊಟ್ಟಿದ್ದೀರಿ. ನಾವು ಆ ಪ್ರದೇಶಕ್ಕೆ ಹೋದಂತಹ ಸಂದರ್ಭದಲ್ಲಿ ನಾವು ೩–೪ ಜಿಲ್ಲೆಗಳು ಮತ್ತು ೮–೧೦ ತಾಲ್ಲೂಕುಗಳನ್ನು ಸುತ್ತಾಡಿದೆವು. ಅಭಾವ ಪ್ರದೇಶದಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧದಲ್ಲಿ ಸರ್ಕಾರದ ಇನ್‌ಚಾರ್ಜ್‌ನಲ್ಲಿ ಇಂಜಿನಿಯರ್ ಇನ್ ಚೀಫ್ ಶ್ರೀ ವಿ.ಗ್ಬಂ ಅವರನ್ನು ಸರ್ಕಾರದವರು ನೇಮಕ ಮಾಡಿದ್ದಾರೆ. ನಮಗೆ ಗೊತ್ತಿರುವ ಹಾಗೆ ನಾವು ಪ್ರವಾಸ ಹೋದಾಗ ಅವರು ಒಂದು ಕಡೆಯೂ ಸಹ ನಮ್ಮನ್ನು ಭೆಟ್ಟಿ ಮಾಡಲಿಲ್ಲ.

ಅಧ್ಯಕ್ಷರು.—ಇದು ಹಳೆಯ ಕಥೆ ಯಾವುದಾದರೂ ಹೊಸದು ಇದ್ದರೆ ಹೇಳಿ.

ಶ್ರೀ ವಾಟಾಳ್ ನಾಗರಾಜ್.— ಹಳೆಯದಾದರೂ, ಹೊಸದಾಗಿ, ಒಂದು ಗುರುತರವಾದ ಜವಾಬ್ದಾರಿಯುತವಾದ ವಿಷಯವನ್ನು ನಾನು ಹೇಳಬೇಕಾಗಿದೆ. ಈ ಬಗ್ಗೆ ಆ ಅಧಿಕಾರಿಯನ್ನು ಕರೆಸಿ ಏನಾದರೂ ಕೇಳಿದ್ದೀರಾ ಅಥವಾ ಅವರು ಯಾವ ಕಾರಣದಿಂದ ಬರಲಿಲ್ಲವೆಂದು ವಿಚಾರಣೆ ನಡೆಸಿದ್ದೀರಾ ? ಇದೇ ರೀತಿ ೧೫ ದಿವಸಗಳ ಕೆಳಗೆ ಬೆಂಗಳೂರಿನ ಮೇಯರ್‌ರವರು ನೀರಿನ ತೊಂದರೆಯ ಬಗ್ಗೆ ಅವರಿಗೆ ಫೋನ ಮಾಡಿದರೆ ಫೋನಿನಲ್ಲಿ ಸಿಗಲಿಲ್ಲ ಆ ಮೇಲೆ ಖುದ್ದಾಗಿ ಭೇಟಿ ಮಾಡಲು ಇಂಟರವ್ಯೂ ತೆಗೆದುಕೊಳ್ಳುವುದಕ್ಕೆ ಹೋದರೆ ಅದನ್ನು ಸಹ ಕೊಡಲಿಲ್ಲ. ಇದರಿಂದ ಬೆಂಗಳೂರಿನ ಎಲ್ಲಾ ನಾಗರೀಕರಿಗೆ ಅವಮಾನ ಮಾಡಿದ ಹಾಗೆ ಆಗಿದೆ. ಇಂಥ ಅಧಿಕಾರಿಗಳಿಗೆ ನೀವು ಕೊಟ್ಟಿರತಕ್ಕಂತಹ ಪವರ್ಸ ಆದರೂ ಏನು? ಇವರು ಬೆಂಗಳೂರಿನ ಪ್ರಥಮ ಪ್ರಜೆಗೆ ಅಗೌರವ ಮಾಡಿದ್ದಾರೆ. ಇದರ ಬಗ್ಗೆ ಮಂತ್ರಿಯವರು ಒಂದು ಹೇಳಿಕೆಯನ್ನು ಕೊಡಬೇಕು. ತಮ್ಮನ್ನು ಸಹ ಇವರು ಬಂದು ನೋಡಿಲ್ಲ, ನಮ್ಮನ್ನು ಸಹ ಡೆಲಿಗೇಶನ್ ಹೋದಾಗ ಬಂದು ಭೇಟಿ ಮಾಡಿಲ್ಲ; ಮತ್ತು ಬೆಂಗಳೂರಿನ ಪ್ರಥಮ ಪ್ರಜೆಗೆ ಇಂಟರ್‌ವ್ಯೂ ಕೊಡದೆ ಅವಮಾನ ಮಾಡಿದ್ದಾರೆ. ಇದರ ಬಗ್ಗೆ ಒಂದು ಹೇಳಿಕೆಯನ್ನು ಮಂತ್ರಿಯವರು ಕೊಡಬೇಕೆಂದು ಹೇಳುತ್ತೇನೆ.

Mysore High Court (Amendment) Bill, 1973
Motion to Consider

MADAM SPEAKER.—I have received the following message from the Governor of Mysore.

> "In pursuance of Clause 3 of article 207 of the Constitution of India, I, Mohanlal Sukhadia, Governor of Mysore, do hereby recommend that the Mysore High Court (Amendment) Bill, 1973 may be considered by the Legislative Assembly."